| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಸಿಸಿ ನಂ. 1683/2019 | | | |
| ಸಾಕ್ಷಿದಾರರ ಹೆಸರು | ನಾಗರಾಜ್ | | |
| ತಂದೆಃ ಹೆಸರು | ಮುನಿನಾರಾಯಣಪ್ಪ | ಪಿಡಬ್ಲ್ಯೂಃ | 1 |
| ವಯಸ್ಸು | 55 ವರ್ಷ | ಸಿಡಬ್ಲ್ಯೂಃ | 1 |
| ಉದ್ಯೋಗ | ಹೋಟೆಲ್ | ಪ್ರಮಾಣ ವಚನ | |
| ವಾಸ ಸ್ಥಳ | ಚಿಂತಾಮಣಿ | ಭೋದಿಸಿದ ದಿನಾಂಕ | 06-06-2024 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಗೈರು ಹಾಜರಿರುವ ಆರೋಪಿಗಳನ್ನು ಗುರುತಿಸುವಲ್ಲಿ ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ದಿಃ15-08-19 ರಂದು ಬೆಳಿಗ್ಗೆ 5-45 ಗಂಟೆಗೆ ಅಶ್ವಿನಿ ಬಡಾವಣೆಯಿಂದ ಚೇಳೂರು ರಸ್ತೆಗೆ ನನ್ನ ಬಾಬ್ತು ದ್ವಿಚಕ್ರವಾಹನವದ ನಂ ಕೆ ಎ 40 ಎಕ್ಸ್ 7886 ವಾಹವನ್ನು ಚಾಲನೆ ಮಾಡಿಕೊಂಡು ಬರುತ್ತಿರುವಾಗ ತಾಲ್ಲೂಕು ಪಂಚಾಯ್ತಿ ಕಛೇರಿಯ ಹತ್ತಿರ ಬರುತ್ತಿದ್ದಾಗ ಅದೇ ರಸ್ತೆಯಲ್ಲಿ ರಾಂಗ್ ವೇ ಅಲ್ಲಿ ಕೆ ಎಸ್ ಆರ್ ಟಿ ಸಿ ಬಸ್ ನಂ. ಕೆ ಎ 40 ಎಫ್ . 1100 ವಾಹವನ್ನು ಚಾಲಕನು ಅತೀ ವೇಗವಾಗಿ ಚಾಲನೆ ಮಾಡಿಕೊಂಡು ಬಂದು ನನ್ನ ವಾಹನಕ್ಕೆ ಡಿಕ್ಕಿ ಪಡಿಸಿದ್ದು ಅದರ ಪರಿಣಾಮವಾಗಿ ನಾನು ಕೆಳಗೆ ಬಿದ್ದಿದ್ದು ನನ್ನ ತಲೆಗೆ ಕೆನ್ನೆಗೆ, ಮೂಗಿಗೆ, ಕಾಲಿಗೆ, ಭುಜಕ್ಕೆ ಮೊಣಕಾಲಿಗೆ ಎಡಕೈ ಗೆ ಪೆಟ್ಟು ಬಿದ್ದು ರಕ್ತಗಾಯವಗಿರುತ್ತದೆ ನನ್ನನ್ನು ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ, ಅಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ರಾಮಯ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಅಪಘಾತಕ್ಕೆ ಅತೀ ವೇಗವಾಗಿ ಚಾಲನೆ ಮಾಡಿಕೊಂಡು ಬಂದ ಬಸ್ ಚಾಲಕ ಕಾರಣನಾಗಿರುತ್ತಾರೆ. ಈ ಬಗ್ಗೆ ಗಂಗಾಧರ್ ಚಾಪಾ-2 ರವರು ದೂರು ದಾಖಲು ಮಾಡಿರುತ್ತಾರೆ. ಒಂದು ವಾರ ಕಲ ಚಿಕಿತ್ಸೆ

ಪಡೆದಿರುತ್ತೇನೆ. ನಂತರ ಅಪಘಾತಕ್ಕೆ ಒಳಗಾದ ವಾಹನಗಳಿಗೆ ಸಂಬಂಧಿಸಿದಂತೆ ವಾಹನ ಬಿಡುಗಡೆ ಕರಾರು ಪತ್ರವನ್ನು ನೀಡಿ ವಾಸವನ್ನು ನನ್ನ ವಶಕ್ಕೆ ಪಡೆದಿರುತ್ತೇನೆ ನನಗೆ ಅಪಘಾತದಿಂದ ಪೆಟ್ಟಾದ್ದ ಕಾರಣ ಹೆಬ್ಬೆಟ್ಟು ಹಾಕಿರುತ್ತೇನೆ.

ವಾಹನ ಬಿಡುಗಡೆ ಕರಾರು ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಪೋಟೋಗಳನ್ನು ನೋಡಿ ಗುರುತಿಸಿದ್ದು ಆದರೆ ಅದರ ಮೂಲ ನಿಯಮ ಪಾಲಿಸದೆ ಇರುವುದರಿಂದ ಪೋಟೋಗಳನ್ನು ನಿಶಾನೆಯಾಗಿ ಗುರುತಿಸಲಾಗಿರುವುದಿಲ್ಲ.

ಪಾಟೀಸವಾಲುಃ ಆರೋಪಿ ಪರ ವಕೀಲರು ಪಟೀಸವಾಲಿಗೆ ಸಮಯ ಕೋರಿದ್ದು 100 ರೂ ವೆಚ್ಚದೊಂದಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಸಿಸಿ ನಂ. 1683/2019 | | | |
| ಸಾಕ್ಷಿದಾರರ ಹೆಸರು | ಚಂದ್ರಶೇಖರ್ | | |
| ತಂದೆಃ ಹೆಸರು | ರಾಮಮೂರ್ತಿ | ಪಿಡಬ್ಲ್ಯೂಃ | 2 |
| ವಯಸ್ಸು | 42 ವರ್ಷ | ಸಿಡಬ್ಲ್ಯೂಃ | 3 |
| ಉದ್ಯೋಗ | ವ್ಯವಸಾಯ | ಪ್ರಮಾಣ ವಚನ | |
| ವಾಸ ಸ್ಥಳ | ಚಿಂತಾಮಣಿ | ಭೋದಿಸಿದ ದಿನಾಂಕ | 06-06-2024 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಗೈರು ಹಾಜರಿರುವ ಆರೋಪಿಗಳನ್ನು ಗುರುತಿಸುವಲ್ಲಿ ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ದಿಃ15-08-19 ರಂದು ಬೆಳಿಗ್ಗೆ 5-45 ಗಂಟೆಗೆ ರಾಘವೇಂದ್ರ ದೇವಸ್ಥಾನಕ್ಕೆ ಹೋಗಿ ಆಚೆ ಬರುತ್ತಿರುವಾಗ ಎಡಭಾಗದಲ್ಲಿ ಕೆ ಎಸ್ ಆ್ಱರ್ ಟಿ ಸಿ ಬಸ್ ಚಾಲಕನು ಬಸ್ ಅನ್ನು ಚಾಲನೆ ಮಾಡಿಕೊಂಡು ಬಂದು ಅಪಘಾತ ಪಡಿಸಿದ್ದು, ಅಲ್ಲಿ ಹೋದಾಗ ಚಾಸ-1 ರವರು ಅಂತ ಗೊತ್ತಾಗಿರುತ್ತದೆ. ರಾಂಗ್ ವೇ ಅಲ್ಲಿ ಕೆ ಎಸ್ ಆರ್ ಟಿ ಸಿ ಬಸ್ ಅಪಘಾತಪಡಿಸಿರುತ್ತದೆ. ಅವರ ತಲೆಗೆ ಕೆನ್ನೆಗೆ, ಮೂಗಿಗೆ, ಕಾಲಿಗೆ, ಭುಜಕ್ಕೆ ಮೊಣಕಾಲಿಗೆ ಎಡಕೈ ಗೆ ಪೆಟ್ಟು ಬಿದ್ದು ರಕ್ತಗಾಯವಗಿರುತ್ತದೆ. ನನ್ನನ್ನು ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ, ಅಲ್ಲಿ ಪ್ರಥಮ ಚಿಕಿತೆ ನೀಡಿ ಹೆಚ್ಚಿನ ಚಿಕಿತ್ಸೆಗೆ ರಾಮಯ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅದೇ ದಿನ ಸಂಜೆ 4 ರಿಂದ 5 ಗಂಟೆಗೆ ಅಪಘಾತದ ನಡದ ಸ್ಥಳದಲ್ಲಿ ಮಾಹಿತಿ ನೀಡಿದ್ದು ನನ್ನ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಕಾಲಕ್ಕೆ ನನ್ನ ಜೊತೆ ಗಂಗಾಧರ್ ಮತ್ತು ವೆಂಕಟೇಶ್ ರವರು ಇರುತ್ತಾರೆ, ಆಗ ಸಮಯ 4 ರಿಂದ 5 ಗಂಟೆಯಾಗಿರುತ್ತದೆ.

ಪಂಚನಾಮೆಯದಲ್ಲಿನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಅದರ ಮೇಲಿನ ಸಹಿಯನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ವಕೀಲರು ಪಟೀಸವಾಲಿಗೆ ಸಮಯ ಕೋರಿದ್ದು 100 ರೂ ವೆಚ್ಚದೊಂದಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.